> ಒಮ್ಮೆ ರಾಜರತ್ನಂ ಅವರಿಗೆ ತೋರಿಸದೆಯೇ ನಾಲ್ಕು ಪುಟಗಳನ್ನು ಅಚ್ಚು ಮಾಡಿಬಿಟ್ಟೆ. ಅದು ತಿಳಿದು ರೇಗಿದ್ದರು. ಆಮೇಲೆ ಅದಕ್ಕೆ ಪ್ರತಿಯಾಗಿ ಮಸಾಲೆ ದೋಸೆ ತಿನ್ನಿಸಿ ಸಮಾಧಾನ ಮಾಡಿದರು...

ಅವರಿಗೆ ತೋರಿಸದೆಯೇ ನಾನು ಅಚ್ಚು ಮಾಡಿಬಿಟ್ಟೆ. 'ಸಾರ್, ಹೀಗೆ ಮಾಡಿದೆ' ಎಂದು ಅವರು ಬಂದಾಗ ಹೇಳಿದೆ.

'ನನ್ನನ್ನು ಕೇಳದೆ, ನನಗೆ ತೋರಿಸದೆ, ಅದು ಹ್ಯಾಗೆ ನೀವು ಪ್ರಿಂಟು ಮಾಡಿದಿರಿ?' ಎಂದು ರಾಜರತ್ನಂ ಭಾರೀ ಕೂಗು ಹಾಕಿದರು. ಒಂದೇ ಸಾಲಾದರೂ ಅವರು ನೋಡಲೇಬೇಕು. ಇದು ಅವರ ಧೋರಣೆ.

ಬಳಿಕ ಆ ನಾಲ್ಕು ಪುಟಗಳನ್ನು ಅವರು ನಾಲ್ಕು ನಾಲ್ಕು ಸಲ ತಿರುವಿ ತಿರುವಿ ಹಾಕಿದರು. ನನಗೆ ಆ ವಿಷಯದಲ್ಲಿ ಪೂರ್ಣ ನಂಬಿಕೆ. ಎಂಥೆಂಥದೋ ಪ್ರೂಫ್ ತಿದ್ದಿದ್ದೇನೆ; ಪ್ರಿಂಟು ಮಾಡಿದ್ದೇನೆ. ಈ ನಾಲ್ಕು ಪುಟಗಳೇನು ಮಹಾ ಎನ್ನುವುದು ನನ್ನ ಧೋರಣೆ.

'ಪರವಾಯಿಲ್ಲ. ಏನೂ ಉಳಿದಿಲ್ಲ. ಆದರೂ ನೀವು ಹೀಗೆ ಮಾಡಬಾರದಿತ್ತು. ಇನ್ನು ಮುಂದೆ ಇಂಥ ಕೆಲಸ ಮಾಡಬೇಡಿ' ಎಂದು ಸಿಡುಕುತ್ತಲೇ ಅವರು ಹೊರಟು ಹೋದರು.

ಸರಿಯಾಗಿ ಮಾತೂ ಆಡದೆ; ತರಿಸಿದ್ದ ಕಾಫಿಯನ್ನೂ ಕುಡಿಯದೆ.

ಕೆಲವು ದಿನಗಳು ಕಳೆದಮೇಲೆ ಬಳೇಪೇಟೆಯ ರಸ್ತೆಯಲ್ಲಿ ಹಠಾತ್ತನೆ ಅವರ ಭೇಟಿ.

ತಮ್ಮ ಪುಸ್ತಕಗಳನ್ನು ತಾವೇ ಅಚ್ಚು ಮಾಡಿಕೊಳ್ಳುತ್ತ, ಹತ್ತಾರು ಪುಸ್ತಕಗಳನ್ನು ಕೈ ಚೀಲಕ್ಕೆ ಹಾಕಿಕೊಂಡು, ಅಂಗಡಿಗಳಿಗೆ ಕೊಟ್ಟು ಬಿಲ್ ವಸೂಲಿ ಮಾಡುವುದು ಅವರ ರೂಢಿ. ಹಾಗೆಯೇ ಫುಟ್‌ಪಾತಿನಲ್ಲಿ ಹರಡಿಕೊಂಡಿರುವ ಪುಸ್ತಕಗಳ ಕಡೆಗೆ ಕಣ್ಣು ಹಾಯಿಸಿಕೊಂಡೇ ಹೋಗುವುದು ಸಹ ಅವರ ರೂಢಿಯೇ.

ಅವರು ಈಗ ನನ್ನನ್ನು ಕಂಡು 'ಬನ್ನಿ' ಎಂದು ಅಲ್ಲಿನ ಒಂದು ಉಡುಪಿ ಹೋಟೆಲಿಗೆ ಕರೆದೊಯ್ದರು.

ಆ ಹೋಟೆಲಿನವರಿಗೆ ಇವರ ಮೇಲೆ ತುಂಬಾ ಭಕ್ತಿ; ವಿಶ್ವಾಸ. ಎಲ್ಲರೂ ಕುಳಿತುಕೊಳ್ಳುವ ಜಾಗ ಇಲ್ಲದೆ ಪ್ರತ್ಯೇಕ ಒಂದು ಕೊಠಡಿಯಲ್ಲಿ ಕುಳಿತು, ಮಸಾಲೆ ದೋಸೆ ತಿಂದು, ಕಾಫಿ ಕುಡಿದು ಹೊರಬಂದೆವು.

ಆ ಹೋಟೇಲಿನ ಮಸಾಲೆ ದೋಸೆ ತುಂಬಾ ಪ್ರಸಿದ್ಧಿ.

ಇವರ ಕೈಯಲ್ಲಿ ಬಿಲ್ ಕೊಡಿಸಬಾರದು ಎಂದು ಕ್ಯಾಷ್ ಬಳಿ ನಾನು ಮುಂದೆ ಬಂದೆ, ಹಣ ಕೊಡಲು ಮುಂದಾದೆ.

ಆದರೆ ರಾಜರತ್ನಂ ಕಣ್ಣುಸನ್ನೆ ಮಾಡಿಬಿಟ್ಟಿದ್ದರು. ಕ್ಯಾಷ್‌ನಲ್ಲಿರುವವರು ನನ್ನ ಬಳಿ ಹಣ ತೆಗೆದುಕೊಳ್ಳಬೇಕಲ್ಲ.

ಹೊಟೇಲ್ ಬಿಟ್ಟು ಹೊರಬಂದಮೇಲೆ 'ನಿಮಗೆ ಮಸಾಲೆ ದೋಸೆ ಯಾಕೆ ಕೊಡಿಸಿದೆ ಗೊತ್ತೆ?' ಎಂದರು. ರಾಜರತ್ನಂ.

'ಯಾಕೆ ಸಾರ್?'

'ಲಂಚ ಕಣ್ರೀ, 'ಲಂಚ?' ಎಂದರು.

'ಆವೊತ್ತು ನಿಮ್ಮ ಮೇಲೆ ನಾನು ಭಾರೀ ರೇಗಾಡಿಬಿಟ್ಟೆ, ನೋಡಿ. ಅದಕ್ಕೇ ಈಗ ಲಂಚ ಕೊಟ್ಟು ಸರಿಮಾಡಿಕೊಳ್ತಾ ಇದೀನಿ. ಪ್ರೆಸ್ಸಿನವರ ದಾಕ್ಷಿಣ್ಯ ನಮಗೆ ಯಾವಾಗಲೂ ಬೇಕೇ ಬೇಕಾಗುತ್ತದಲ್ಲಪ್ಪ...' ಎಂದವರೇ ನನ್ನ ಭುಜದ ಮೇಲೆ ಕೈಹಾಕಿ ಬಳಸಿಕೊಂಡು ದೊಡ್ಡದಾಗಿ ನಕ್ಕುಬಿಟ್ಟರು.

ಇದು ರಾಜರತ್ನಂ ವರಸೆ; ನೋಡಿ.

(ಜುಲೈ, 1998)